ಓ.ಎಸ್. ನಂ.29/2019
ಪಿಡಬ್ಲು-1

ದಿನಾಂಕ 18.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 3ನೆ ಪ್ರತಿವಾದಿ ಪರ ವಕಿಲರಿಂದಃ

ಸರ್ವೆ ನಂ.122 ಮತ್ತು 128 ಗಳಲ್ಲಿ ಒಟ್ಟು 39-ಎಕರೆ 05-ಗುಂಟೆ ಜಮೀನು ಇದೆ ಎಂದರೆ ಸರಿ. ನಾನು ಒಟ್ಟು 35-ಎಕರೆ 14-ಗುಂಟೆ ಜಮೀನಗಳಿಗೆ ಸಂಬಂಧಿಸಿದಂತೆ ಈ ದಾವೆ ಹೊಡಿರುತ್ತೇನೆ. ನನ್ನ ಚಿಕ್ಕಪ್ಪ ಚಂದಪ್ಪ ಒಕ್ಕಲುತನ ಕೆಲಸ ಮಾಡುತ್ತಿದ್ದನು ಎಂದರೆ ಸಾಕ್ಷಿ ಒಕ್ಕಲುತನ ಜೊತೆಗೆ ಹಲಿಗೆ ಬಾರಿಸುವ ಕೆಲಸ ಮಾಡುತ್ತಿದ್ದ ಎಂದು ಹೇಳುತ್ತಾರೆ. ನನ್ನ ತಂದೆ-ತಾಯಿಯ ಅಂತ್ಯಕ್ರಿಯೆಯ ಖರ್ಚು ವೆಚ್ಚಗಳನ್ನು ನನ್ನ ಚಿಕ್ಕಪ್ಪ ಚಂದಪ್ಪರವರು ನೋಡಿಕೊಂಡಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳಿಂದ ಬಂದ ಆದಾಯ ಕುಟುಂಬದ ಖರ್ಚು ವೆಚ್ಚಗಳಿಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿ.

ಕೆನಾಲ ಪರಿಹಾರವನ್ನು 3ನೆ ಪ್ರತಿವಾದಿ ಕೆನಲಾ ಪರಿಹಾರ ಹಣವನ್ನು ಯಾವ ಕಾರಣಕ್ಕಾಗಿ ತೆಗೆದುಕೊಂಡಿದ್ದಾರೆಂದು ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದೆರ ಸಾಕ್ಷಿ ಮಾಡಿಲ್ಲ ಎಂದು ಹೇಳುತ್ತಾರೆ. ನಮ್ಮ ಕುಟುಂಬದ ಸಾಲ ತೀರಿಸುವ ಸಲುವಾಗಿ ನನ್ನ ಚಿಕ್ಕಪ್ಪ ಚಂದಪ್ಪನು 3ನೆ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ನನಗೆ ಯಾವುದೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ